3588 (4528) ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಬ್ಯಾಡಗಿ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಾವೇರಿ ಜಿಲ್ಲೆಯಲ್ಲಿ ಜಾರಿಗೊಳಿಸಿದ ಕಾರ್ಯಕ್ರಮಗಳಾವುವು ; (ವಿವರ ಒದಗಿಸುವುದು) ;

ಆ) ಜಿಲ್ಲೆಯಲ್ಲಿ ನಿರ್ಮಾಣಗೊಳಿಸಿದ ರಂಗಮಂದಿರ ಗಳೆಷ್ಟು; ಯಾವ ಯಾವ ಹಂತದಲ್ಲಿವೆ ;

ಇ) ಹಾವೇರಿ ಜಿಲ್ಲೆಯುಲ್ಲಿ ಎಷ್ಟು ಜನ ಸಾಹಿತಿ ಕಲಾವಿದರಿಗೆ ಮಾಸಾಶನ ಮಂಜೂರಾತಿ ನೀಡಲಾಗಿದೆ ;

ಈ) ಮಂಜೂರಾತಿಗಾಗಿ ಬಂದಿರುವ ಅರ್ಜಿಗಳಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ಒದಗಿಸುವುದು);

ಉ) ಜಿಲ್ಲೆಯಲ್ಲಿ ಎಷ್ಟು ಜನ ಕಲಾವಿದರಿಗೆ ವೇಷಭೂಷಣ ಮತ್ತು ವಾದ್ಯ ಪರಿಕರಗಳನ್ನು ಒದಗಿಸಲಾಗಿದೆ ; (ವಿವರ ನೀಡುವುದು) ;

ಊ) ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಒದಗಿಸಿದ ಸವಲತ್ತುಗಳೇನು ; (ಮಾಹಿತಿ ಒದಗಿಸುವುದು) ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) –

ಅ) ಹಾವೇರಿ ಜಿಲ್ಲೆಯಲ್ಲಿ ಜಾರಿಗೊಳಿಸಿರುವ ಕಾರ್ಯಕ್ರಮಗಳಾವುವೆಂದರೆ:–

1. ಸ್ಥಳೀಯ ಕಾರ್ಯಕ್ರಮ,
2. ಸಾಂಸ್ಕೃತಿಕ ಸೌರಭ,
3. ರಂಗಸುಗ್ಗಿ,
4. ಚಿಗುರು,
5. ಸಂಧ್ಯಾರಾಗ
6. ಗ್ರಾಮೀಣ ದರ್ಶನ,
7. ಕಲಾಪ್ರತಿಭೋತ್ಸವ
8. ಪಂಡಿತ ಪಂಚಾಕ್ಷರಿ ಗವಾಯಿಗಳ ಹೆಸರಿನಲ್ಲಿ ಸಂಗೀತೋತ್ಸವ.
9. ಸಾಂಸ್ಕೃತಿಕ ಪರಂಪರೆ ಘೋಷಣೆಯಡಿ ಕಲಿಕಾ ಕೇಂದ್ರ ಹಾಗೂ
10. ಕನ್ನಡ ಕಾರ್ಯಶಿಬಿರ.

ಆ) ಅ) ಜಿಲ್ಲಾ ರಂಗಮಂದಿರ ನಿರ್ಮಾಣವಾಗಿಲ್ಲ ಆದರೆ ಜಿಲ್ಲೆಯಲ್ಲಿ ನಿರ್ಮಾಣಗೊಳಿಸಿರುವ ಬಯಲು ರಂಗಮಂದಿರಗಳ ಸಂಖ್ಯೆ 16 ಆಗಿದ್ದು ಇವುಗಳಲ್ಲಿ 10 ಪೂರ್ಣಗೊಂಡಿದ್ದು. 6 ಪ್ರಗತಿಯಲ್ಲಿವೆ.

ಆ) ಕರ್ಬಗಿ, ಬ್ಯಾಡಗಿ, ಹಾನಗಲ್‌ನಲ್ಲಿ ಶೇ.40 ರಷ್ಟು ರಟ್ಟಿಹಳ್ಳಿ, ಹಿರೇಕೆರೂರಿನಲ್ಲಿ ಶೇ.30 ರಷ್ಟು ಕೆಲಸವಾಗಿದೆ. ಹಾವೇರಿಯಲ್ಲಿ ಕೆಲಸ ಪ್ರಾರಂಭವಾಗ ಬೇಕಾಗಿದೆ.

ಇ) ಹಾವೇರಿ ಜಿಲ್ಲೆಯಲ್ಲಿ 57 ಜನಸಾಹಿತಿ–ಕಲಾವಿದರಿಗೆ ಮಾಸಾಶನವನ್ನು ಮಂಜೂರುಮಾಡಲಾಗಿದೆ.

ಈ) ಅ) ಮಂಜೂರಾತಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ 118.

ಆ) ಹಾವೇರಿ–24, ಬ್ಯಾಡಗಿ–15,ಶಿಗ್ಗಾಂವ–09, ಹಿರೇಕೆರೂರು–20, ಹಾನಗಲ್–10, ರಾಣೆಬೆನ್ನೂರು–32, ಸವಣೂರು–8

ಉ) 2002 ರಿಂದ 2005 ರ ಮಾರ್ಚಿ 31 ರವರೆಗೆ ಒಟ್ಟು 93 ಸಂಘ ಸಂಸ್ಥೆಗಳಿಗೆ ವೇಷಭೂಷಣ ಹಾಗೂ ವಾದು ಪರಿಕರಗಳನ್ನು ಕೊಳ್ಳಲು ಧನಸಹಾಯ ಮಾಡಲಾಗಿದೆ.

ಊ) 1. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಕಲಾವಿದರಿಗೆ ವಿಶೇಷ ಘಟಕ ಯೋಜನೆಯಡಿ ಸಾಂಸ್ಕೃತಿಕ ಸಾಹಿತ್ಯಕ ಕಾರ್ಯಕ್ರಮಗಳನ್ನು ಕೊಟ್ಟು ಹಾಗೂ ಕಾರ್ಯಕ್ರಮಗಳನ್ನು ಪ್ರಾಯೋಜಿಸಿ ಪ್ರೋತ್ಸಾಹ ನೀಡಲಾಗುತ್ತಿದೆ.

2. ವಾದ್ಯ ಪರಿಕರ ಹಾಗೂ ವೇಷ ಭೂಷಣಗಳನ್ನು ಕೊಳ್ಳಲು ಧನಸಹಾಯ ಮಾಡಲಾಗಿದೆ.

3. ಗುರು–ಶಿಷ್ಯ ಪರಂಪರೆ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಮಕ್ಕಳಿಗೆ ಸಂಗೀತ ತರಬೇತಿ ಕುರಿತು ಕಲಿಕೆ ಕೇಂದ್ರ ನಡೆಸಲಾಗಿದೆ.

4. ಪರಂಪರೆ ಘೋಷಣೆ ಯೋಜನೆಯಡಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಶಹನಾಯ್ ಕಲಿಕಾ ಕೇಂದ್ರವನ್ನು ನಡೆಸಲಾಗಿದೆ.

3589 (4328) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) – ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?